# ಗ್ಲೆನ್‌ಕಾರ್!
## ಹಿಮ ಕರಗಿ ಹಸಿರಾಗಿ...

ಐರ್ಲೆಂಡ್‌ನ ಪ್ರವಾಸೋದ್ಯಮ ನಕ್ಷೆಯಲ್ಲಿ ಗ್ಲೆನ್‌ಕಾರ್‌ಗೆ ವಿಶೇಷ ಮಹತ್ವವಿದೆ. ಕಾಡು, ಸರೋವರ, ಜಲಪಾತ, ಪರ್ವತ ಪ್ರದೇಶಗಳಿಂದ ಕೂಡಿರುವ ಈ ನಿಸರ್ಗಧಾಮದ ಸೌಂದರ್ಯ ಪ್ರಕೃತಿಪ್ರಿಯ ಸಹೃದಯರ ಹೃನ್ಮನಗಳಿಗೆ ಹಬ್ಬವನ್ನುಂಟುಮಾಡುತ್ತದೆ.

■ ಪ್ರೊ. ಸಿ. ಸಿದ್ದರಾಜು ಆಲಕೆರೆ

ಐರ್ಲೆಂಡ್ ದೇಶದ ಪ್ರಕೃತಿಯ ನೆಲೆಬೀಡುಗಳಲ್ಲಿ ಗ್ಲೆನ್‌ಕಾರ್ ಸ್ಥಳವೂ ಒಂದು. ಇಲ್ಲಿನ ಪ್ರಕೃತಿ ಸೌಂದರ್ಯ ಸಹೃದಯರ ಕಣ್ಣುಗಳಿಗೆ ಹಬ್ಬ. ಮರ–ಗಿಡಗಳು ಮಾತ್ರವಲ್ಲ – ಪರ್ವತ, ಕಾಡು, ನದಿ, ಜಲಪಾತ, ಸರೋವರ ಇವೆಲ್ಲವೂ ಸೇರಿಕೊಂಡು ರೂಪುಗೊಂಡ ಅದ್ಭುತ ಸೌಂದರ್ಯರಾಶಿ ಗ್ಲೆನ್‌ಕಾರ್.


ಐರ್ಲೆಂಡ್ ವಾಯುವ್ಯ ಯೂರೋಪ್‌ನಲ್ಲಿರುವ ಒಂದು ದ್ವೀಪ. ಐರ್ಲೆಂಡ್ ದೇಶವೇ ಹಸಿರು ಸೀರೆಯನ್ನುಟ್ಟ ಸೌಂದರ್ಯವತಿಯಂತೆ ನೋಡುಗರ ಕಣ್ಣಿಗೆ ಕಾಣುತ್ತದೆ. ಆ ದೇಶದ ಪೂರ್ವ ಅಂಚಿನಲ್ಲಿರುವ ರಾಜಧಾನಿ ಡಬ್ಲಿನ್‌ನಿಂದ ಮತ್ತೊಂದು ಅಂಚಿನಲ್ಲಿರುವ ಸ್ಲಿಗೊ ಕರಾವಳಿ ಪಟ್ಟಣಕ್ಕೆ 208 ಕಿ.ಮೀ. ದೂರವನ್ನು ಗ್ಲೆನ್‌ಕಾರ್‌ಗೆ ಹೋಗಲು ಕ್ರಮಿಸಬೇಕು. ಸ್ಲಿಗೊ ನಗರ ಒಂದು ಕೌಂಟಿ ಕೇಂದ್ರ (ಕೌಂಟಿ ಎಂದರೆ, ನಮ್ಮಲ್ಲಿನ ಜಿಲ್ಲಾ ಕೇಂದ್ರವಿದ್ದಂತೆ). ಅಲ್ಲಿಂದ ಈಶಾನ್ಯ ದಿಕ್ಕಿನಲ್ಲಿ 13 ಕಿ.ಮೀ. ದೂರ ಕ್ರಮಿಸಿದರೆ ಗ್ಲೆನ್‌ಕಾರ್ ನಿಸರ್ಗಧಾಮ ಸಿಗುತ್ತದೆ.

ಗ್ಲೆನ್‌ಕಾರ್ ಕಣಿವೆಯು ಉತ್ತರಕ್ಕೆ ಡಾರ್ಟಿ (ಡಾರ್ಟ್ರಿ) ಪರ್ವತ, ದಕ್ಷಿಣಕ್ಕೆ ಕೋಪ್ಸ್ ಪರ್ವತಗಳನ್ನೊಳಗೊಂಡಿರುವ ಪರ್ವತ ಶ್ರೇಣಿಯಲ್ಲಿದೆ. ಗ್ಲೆನ್‌ಕಾರ್ ಎಂಬ ಹೆಸರು ಐರಿಷ್ ಭಾಷೆಯ 'ಗ್ಲೆನ್ನಾಚೈಥಾ' ಎಂಬ ಪದದಿಂದ ಬಂದಿದೆ. ಐರ್ಲೆಂಡ್ ಸಹಾ ಹಿಂದೊಮ್ಮೆ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತ್ತು. ಆ ಕಾಲದಲ್ಲಿ ಬ್ರಿಟಿಷರು ಅದನ್ನು ಗ್ಲೆನ್‌ಕಾರ್ ಎಂದು ಕರೆದರು. ಈಗ ಅದೇ ಹೆಸರಿನಿಂದ ಆ ಸ್ಥಳವನ್ನು ಕರೆಯಲಾಗುತ್ತದೆ. ಆ ಪದದ ಅರ್ಥ 'ನಿಂತಿರುವ ಕಲ್ಲಿನ ಕಣಿವೆ' ಎಂದು.

ಪತ್ನಿಯ ಜತೆ ಅಥ್ಲೋನ್ ಪಟ್ಟಣದಲ್ಲಿ ವಾಸವಿರುವ ಮಗಳು ಹಾಗೂ ಅಳಿಯನ ಮನೆಗೆ ಹೋಗಿದ್ದಾಗ ಆ ನಿಸರ್ಗ ಧಾಮವನ್ನು ನೋಡುವ ಅವಕಾಶ ದೊರಕಿತು. ಒಂದು ಭಾನುವಾರದ ಬೆಳಿಗ್ಗೆ ಮನೆಯಲ್ಲಿಯೇ ತಿಂಡಿ ತಿಂದು, ಮಧ್ಯಾಹ್ನದ ಉಪಾಹಾರಕ್ಕಾಗಿ ಹುಳಿಯನ್ನ ಹಾಗೂ ಮೊಸರನ್ನವನ್ನು ಡಬ್ಬಿಗೆ ತುಂಬಿಕೊಂಡು ಕಾರಿನಲ್ಲಿ ಸ್ಲಿಗೋ ನಗರದ ಕಡೆ ಹೊರಟೆವು. ಅಲ್ಲಿಂದ ಸ್ಥಳೀಯ ರಸ್ತೆಯ ಮೂಲಕ ಗ್ಲೆನ್‌ಕಾರ್ ತಲುಪಿದೆವು.

ಗ್ಲೆನ್‌ಕಾರ್ ಕಡೆ ಕಾರಿನಲ್ಲಿ ಹೋಗುವಾಗ ನಮಗೆ ಸ್ವಾಗತ ಕೋರಲು ಅಲಂಕೃತಗೊಂಡು ನಿಂತಿರುವಂತೆ ಒಂದು ಕಡೆ ಪರ್ವತದ ಸಾಲು, ಮತ್ತೊಂದು ಕಡೆ ಗ್ಲೆನ್‌ಕಾರ್ ಸರೋವರ





ಸರೋವರದ ಮತ್ತೊಂದು ಬದಿಯಲ್ಲಿರುವ ಪರ್ವತಗಳು.